# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| | | |
|---|---|---|
| ಭಾಗ – ೪ ಎ<br>Part – IV A | ಬೆಂಗಳೂರು, ಮಂಗಳವಾರ, ೧೩, ಸೆಪ್ಟೆಂಬರ್, ೨೦೨೨(ಭಾದ್ರಪದ, ೨೨, ಶಕವರ್ಷ, ೧೯೪೪)<br>BENGALURU, TUESDAY, 13, SEPTEMBER, 2022(BHADRAPADA, 22, SHAKAVARSHA, 1944) | ನಂ. ೪೫೦<br>No. 450 |

**ಕರ್ನಾಟಕ ವಿಧಾನಸಭೆ**

**ಹದಿನೈದನೇ ವಿಧಾನಸಭೆ**

**ಹದಿಮೂರನೇ ಅಧಿವೇಶನ**

## ಕರ್ನಾಟಕ ಮುನಿಸಿಪಾಲಿಟಿಗಳ (ತಿದ್ದುಪಡಿ) ವಿಧೇಯಕ, 2022

**(2022ರ ವಿಧಾನಸಭೆಯ ವಿಧೇಯಕ ಸಂಖ್ಯೆ–16)**

ಕರ್ನಾಟಕ ಮುನಿಸಿಪಾಲಿಟಿಗಳ ಅಧಿನಿಯಮ 1964ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಮುನಿಸಿಪಾಲಿಟಿಗಳ ಅಧಿನಿಯಮ 1964ನ್ನು (1964ರ ಕರ್ನಾಟಕ ಅಧಿನಿಯಮ 22) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ಮೂರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು, ಕರ್ನಾಟಕ ಮುನಿಸಿಪಾಲಿಟಿಗಳ (ತಿದ್ದುಪಡಿ) ಅಧಿನಿಯಮ, 2022 ಎಂದು ಕರೆಯತಕ್ಕದ್ದು.

(2) ಇದು 2021ರ ಆಗಸ್ಟ್ 12ನೇ ದಿನಾಂಕದಿಂದ ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

**2. 387ನೇ ಪ್ರಕರಣದ ತಿದ್ದುಪಡಿ.-** ಕರ್ನಾಟಕ ಮುನಿಸಿಪಾಲಿಟಿಗಳ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 22)ರ 387ನೇ ಪ್ರಕರಣವನ್ನು ಬಿಟ್ಟುಬಿಡತಕ್ಕದ್ದು.

**3. ನಿರಸನ ಮತ್ತು ಉಳಿಸುವಿಕೆಗಳು.-** (1) ಕರ್ನಾಟಕ ಮುನಿಸಿಪಾಲಿಟಿಗಳ (ತಿದ್ದುಪಡಿ) ಅಧ್ಯಾದೇಶ, 2022ನ್ನು (2022ರ ಕರ್ನಾಟಕ ಅಧ್ಯಾದೇಶ 03) ಈ ಮೂಲಕ ನಿರಸನಗೊಳಿಸಲಾಗಿದೆ.

(2) ಅಂಥ ನಿರಸನವು ಏನೇ ಒಳಗೊಂಡಿದ್ದರೂ ಸದರಿ ಅಧ್ಯಾದೇಶದ ಮೂಲಕ ತಿದ್ದುಪಡಿಯಾದಂತೆ ಮೂಲ ಅಧಿನಿಯಮದ ಅಡಿಯಲ್ಲಿ ಏನೇ ಮಾಡಿದ್ದರೂ ಅಥವಾ ಯಾವುದೇ

ಕ್ರಮವನ್ನು ಕೈಗೊಂಡಿದ್ದರೂ ಈ ಅಧಿನಿಯಮದ ಅಡಿಯಲ್ಲಿ ತಿದ್ದುಪಡಿಯಾದಂತೆ ಮೂಲ ಅಧಿನಿಯಮದಲ್ಲಿ ಮಾಡಲಾಗಿದೆ ಅಥವಾ ಕೈಗೊಳ್ಳಲಾಗಿದೆ ಎಂದು ಭಾವಿಸತಕ್ಕದ್ದು.

**ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ**

ಸ್ಥಳೀಯ ಯೋಜನಾ ಪ್ರಾಧಿಕಾರಗಳ ಅಧಿಕಾರ ವ್ಯಾಪ್ತಿಗೆ ಒಳಪಡದೇ ಇರುವ ಪ್ರದೇಶಗಳಲ್ಲಿ ಕಟ್ಟಡದ ನಕ್ಷೆಗೆ ಮಂಜೂರಾತಿಯನ್ನು ಪಡೆಯುವಲ್ಲಿನ ತಾಂತ್ರಿಕ ತೊಂದರೆಗಳನ್ನು ತೆಗೆದು ಹಾಕಲು ದಿನಾಂಕ: 11.05.2022ರಂದು ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಸಣ್ಣ ನೀರಾವರಿ ಮಂತ್ರಿಯವರ ನೇತೃತ್ವದಲ್ಲಿ ಇ-ಸ್ವತ್ತು ಹಾಗೂ ಇ-ಖಾತಾ ಬಗ್ಗೆ ಸಚಿವ ಸಂಪುಟ ಉಪಸಮಿತಿಯ ಸಭೆ ನಡೆಸಲಾಯಿತು. ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ (1963ರ ಕರ್ನಾಟಕ ಅಧಿನಿಯಮ 11)ರ 4-ಕೆ ಪ್ರಕರಣವು ಸ್ಥಳೀಯ ಯೋಜನಾ ಪ್ರಾಧಿಕಾರದ ಹೊರತಾದ ಪ್ರದೇಶಗಳ ಭೂಮಿಯಲ್ಲಿನ ಅಭಿವೃದ್ಧಿಯ ವಿನಿಯಮವನ್ನು ಗೊತ್ತುಪಡಿಸುವುದು ಈ ದೃಷ್ಟಿಯಿಂದ ಕರ್ನಾಟಕ ಮುನಿಸಿಪಾಲಿಟಿಗಳ ಅಧಿನಿಯಮ 1964 (1964ರ ಕರ್ನಾಟಕ ಅಧಿನಿಯಮ 22)ರ 387ನೇ ಪ್ರಕರಣದ ಉಪಬಂಧಗಳನ್ನು ದಿನಾಂಕ: 12.08.2021 ರಿಂದ ಅಂದರೆ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961 (1963ರ ಕರ್ನಾಟಕ ಅಧಿನಿಯಮ 11)ದ 4-ಕೆ ಪ್ರಕರಣವನ್ನು ಸೇರಿಸಲಾದ ದಿನಾಂಕದಿಂದ ಜಾರಿಗೆ ಬರುವಂತೆ ಬಿಟ್ಟುಬಿಡುವುದು ಅವಶ್ಯಕವಾಗಿದೆ.

ಆದ್ದರಿಂದ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಇಲಾಖೆಯಿಂದ ಗ್ರಾಮಾಂತರ ಪ್ರದೇಶದಲ್ಲಿ ಕಟ್ಟಡದ ನಕ್ಷೆಗಳಿಗೆ ಅನುಮೋದನೆ ಪಡೆಯುವುದರಿಂದ ವಿನಾಯಿತಿಗೆ ಮತ್ತು ಇದಕ್ಕೆ ಸಂಬಂಧಪಟ್ಟ ಅಥವಾ ಆನುಷಂಗಿಕ ವಿಷಯಗಳಿಗಾಗಿ ಕರ್ನಾಟಕ ಮುನಿಸಿಪಾಲಿಟಿಗಳ ಅಧಿನಿಯಮ 1964 (1964ರ ಕರ್ನಾಟಕ ಅಧಿನಿಯಮ 22)ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಿದೆ.

ವಿಷಯವು ತುರ್ತುಸ್ವರೂಪದ್ದಾದ್ದರಿಂದ ಮತ್ತು ಕರ್ನಾಟಕ ವಿಧಾನಮಂಡಲದ ಉಭಯ ಸದನಗಳು ಅಧಿವೇಶನದಲ್ಲಿ ಇಲ್ಲದಿದ್ದುದರಿಂದ, ಮೇಲಿನ ಉದ್ದೇಶವನ್ನು ಸಾಧಿಸಲು ಕರ್ನಾಟಕ ಮುನಿಸಿಪಾಲಿಟಿಗಳ (ತಿದ್ದುಪಡಿ) ಅಧ್ಯಾದೇಶ, 2022ನ್ನು (2022ರ ಕರ್ನಾಟಕ ಅಧ್ಯಾದೇಶ 03) ಪ್ರಖ್ಯಾಪಿಸಲಾಗಿತ್ತು.

ಈ ವಿಧೇಯಕವು ಅಧ್ಯಾದೇಶದ ಬದಲಿ ವಿಧೇಯಕವಾಗಿದೆ.

ಆದ್ದರಿಂದ ಈ ವಿಧೇಯಕ.

## ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಹೆಚ್ಚಿನ ಆರ್ಥಿಕ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ಕರ್ನಾಟಕ ವಿಧಾನ ಸಭೆಯ ಕಾರ್ಯ ವಿಧಾನ ಮತ್ತು ನಡವಳಿಕೆ ನಿಯಮಗಳ 80ನೇ ನಿಯಮದ (1)ನೇ ಉಪನಿಯಮದ ಮೂಲಕ ಅಗತ್ಯಪಡಿಸಲಾದಂತೆ ವಿವರಣಾತ್ಮಕ ಹೇಳಿಕೆ.**

ಸ್ಥಳೀಯ ಯೋಜನಾ ಪ್ರಾಧಿಕಾರಗಳ ಅಧಿಕಾರ ವ್ಯಾಪ್ತಿಗೆ ಒಳಪಡದೇ ಇರುವ ಪ್ರದೇಶಗಳಲ್ಲಿ ಕಟ್ಟಡದ ನಕ್ಷೆಗೆ ಮಂಜೂರಾತಿಯನ್ನು ಪಡೆಯುವಲ್ಲಿನ ತಾಂತ್ರಿಕ ತೊಂದರೆಗಳನ್ನು ತೆಗೆದು ಹಾಕಲು ದಿನಾಂಕ: 11.05.2022ರಂದು ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಸಣ್ಣ ನೀರಾವರಿ ಮಂತ್ರಿಯವರ ನೇತೃತ್ವದಲ್ಲಿ ಇ-ಸ್ವತ್ತು ಹಾಗೂ ಇ-ಖಾತಾ ಬಗ್ಗೆ ಸಚಿವ ಸಂಪುಟ ಉಪಸಮಿತಿಯ ಸಭೆ ನಡೆಸಲಾಯಿತು. ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ (1963ರ ಕರ್ನಾಟಕ ಅಧಿನಿಯಮ 11)ರ 4-ಕೆ ಪ್ರಕರಣವು ಸ್ಥಳೀಯ ಯೋಜನಾ ಪ್ರಾಧಿಕಾರದ ಹೊರತಾದ ಪ್ರದೇಶಗಳ ಭೂಮಿಯಲ್ಲಿನ ಅಭಿವೃದ್ಧಿಯ ವಿನಿಯಮವನ್ನು ಗೊತ್ತುಪಡಿಸುವುದು ಈ ದೃಷ್ಟಿಯಿಂದ ಕರ್ನಾಟಕ ಮುನಿಸಿಪಾಲಿಟಿಗಳ ಅಧಿನಿಯಮ 1964 (1964ರ ಕರ್ನಾಟಕ ಅಧಿನಿಯಮ 22)ರ 387ನೇ ಪ್ರಕರಣದ ಉಪಬಂಧಗಳನ್ನು ದಿನಾಂಕ: 12.08.2021 ರಿಂದ ಅಂದರೆ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961 (1963ರ ಕರ್ನಾಟಕ ಅಧಿನಿಯಮ 11)ದ 4-ಕೆ ಪ್ರಕರಣವನ್ನು ಸೇರಿಸಲಾದ ದಿನಾಂಕದಿಂದ ಜಾರಿಗೆ ಬರುವಂತೆ ಬಿಟ್ಟುಬಿಡುವುದು ಅವಶ್ಯಕವಾಗಿದೆ.

ಆದ್ದರಿಂದ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಇಲಾಖೆಯಿಂದ ಗ್ರಾಮಾಂತರ ಪ್ರದೇಶದಲ್ಲಿ ಕಟ್ಟಡದ ನಕ್ಷೆಗಳಿಗೆ ಅನುಮೋದನೆ ಪಡೆಯುವುದರಿಂದ ವಿನಾಯಿತಿಗೆ ಮತ್ತು ಇದಕ್ಕೆ ಸಂಬಂಧಪಟ್ಟ ಅಥವಾ ಆನುಷಂಗಿಕ ವಿಷಯಗಳಿಗಾಗಿ ಕರ್ನಾಟಕ ಮುನಿಸಿಪಾಲಿಟಿಗಳ ಅಧಿನಿಯಮ 1964 (1964ರ ಕರ್ನಾಟಕ ಅಧಿನಿಯಮ 22)ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಿದೆ.

ವಿಷಯವು ತುರ್ತುಸ್ವರೂಪದ್ದಾದ್ದರಿಂದ ಮತ್ತು ಕರ್ನಾಟಕ ವಿಧಾನಮಂಡಲದ ಉಭಯ ಸದನಗಳು ಅಧಿವೇಶನದಲ್ಲಿ ಇಲ್ಲದಿದ್ದುದರಿಂದ, ಮೇಲಿನ ಉದ್ದೇಶವನ್ನು ಸಾಧಿಸಲು ಕರ್ನಾಟಕ ಮುನಿಸಿಪಾಲಿಟಿಗಳ (ತಿದ್ದುಪಡಿ) ಅಧ್ಯಾದೇಶ, 2022ನ್ನು (2022ರ ಕರ್ನಾಟಕ ಅಧ್ಯಾದೇಶ 03) ಪ್ರಖ್ಯಾಪಿಸಲಾಗಿತ್ತು.

**ಎನ್. ನಾಗರಾಜ (ಎಂಟಿಬಿ)**
ಪೌರಾಡಳಿತ ಮಂತ್ರಿ

**ಎಂ.ಕೆ. ವಿಶಾಲಾಕ್ಷಿ**
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ

## ಅನುಬಂಧ

**ಕರ್ನಾಟಕ ಮುನಿಸಿಪಾಲಿಟಿಗಳ ಅಧಿನಿಯಮ, 1964ರ**
**(1964ರ ಕರ್ನಾಟದ ಅಧಿನಿಯಮ 22) ಉದೃತ ಭಾಗ**

**XX XX XX**

**387. ಯೋಜನಾ ಪ್ರಾಧಿಕಾರದೊಂದಿಗೆ ಸಮಾಲೋಚನೆ.-** ಮುನ್ಸಿಪಲ್ ಕೌನ್ಸಿಲ್, ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮದ ಮೇರೆಗೆ ಯೋಜನಾ ಪ್ರಾಧಿಕಾರವನ್ನು ರಚಿಸದೆ ಇರುವ ಸ್ಥಳಗಳಲ್ಲಿ ಪಟ್ಟಣ ಯೋಜನೆಗೆ ಸಂಬಂಧಿಸಿದ ವಿಷಯಗಳಲ್ಲಿ ಅತಿ ಸಮೀಪದಲ್ಲಿರುವ ಯೋಜನಾ ಪ್ರಾಧಿಕಾರದೊಡನೆ ಸಮಾಲೋಚಿಸತಕ್ಕದ್ದು.

**XX XX XX**

**KARNATAKA LEGISLATIVE ASSEMBLY**

**FIFTEENTH LEGISLATIVE ASSEMBLY**

**THIRTEENTH SESSION**

# THE KARNATAKA MUNICIPALITIES (AMENDMENT) BILL, 2022

**(LA Bill No. 16 of 2022)**

A Bill further to amend the Karnataka Municipalities Act, 1964.

Whereas it is expedient further to amend the Karnataka Municipalities Act, 1964 (Karnataka Act 22 of 1964) for the purposes hereinafter appearing;

Be it enacted by the Karnataka State Legislature in the seventy third year of the Republic of India as follows, namely:-

**1. Short title and commencement.-**(1) This Act may be called the Karnataka Municipalities (Amendment) Act, 2022.

(2) It shall be deemed to have come into force with effect from the 12th day of August, 2021.

**2. Amendment of section 387.-** In the Karnataka Municipalities Act, 1964 (Karnataka Act 22 of 1964), section 387 shall be omitted.

**3. Repeal and savings.-**(1) The Karnataka Municipalities (Amendment) Ordinance, 2022 (Karnataka Ordinance 03 of 2022) is hereby repealed.

(2) Notwithstanding such repeal, anything done or any action taken under the Principal Act, as amended by the said Ordinance, shall be deemed to have been done or taken under the Principal Act, as amended by this Act.

## STATEMENT OF OBJECTS AND REASONS

The cabinet sub-committee on E-Swaththu and E-Khatha, headed by the Honorable Minister for Law, Parliamentary Affairs and Minor Irrigation, has decided in its meeting held on 11.05.2022, to remove the technical difficulties in obtaining building plan sanctions in the areas which do not fall in the jurisdiction of the local planning authorities. Section 4-K of the Karnataka Town and Country Planning Act, 1961 (Karnataka Act 11 of 1963) stipulates the regulation of development of land in the areas other than the local planning area. In view of this, the provisions of section 387 of the Karnataka Municipalities Act, 1964 (Karnataka Act 22 of 1964) needs to be omitted with effect from 12.08.2021, i.e. from the date of insertion of section 4-K in the Karnataka Town and Country Planning Act, 1961 (Karnataka Act 11 of 1963).

Therefore it is considered necessary further to amend the Karnataka Municipalities Act, 1964 (Karnataka Act 22 of 1964) to exempt taking approval for building plans in rural areas from the Department of Town and Country Planning and for matters connected therewith or incidental thereto.

As the matter was urgent and both the Houses of the State Legislature were not in session, the Karnataka Municipalities (Amendment) Ordinance, 2022 (Karnataka Ordinance 03 of 2022) was promulgated to achieve the above object.

This Bill seeks to replace the above Ordinance.

Hence, the Bill.

## FINANCIAL MEMORANDUM

There is no extra expenditure involved in the proposed legislative measure.

**EXPLANATORY STATEMENT AS REQUIRED BY SUB-RULE (1) OF RULE 80 OF THE RULES OF PROCEDURE AND CONDUCT OF BUSINESS IN THE KARNATAKA LEGISLATIVE ASSEMBLY.**

The cabinet sub-committee on E-Swaththu and E-Khatha, headed by the Honorable Minister for Law, Parliamentary Affairs and Minor Irrigation, has decided in its meeting held on 11.05.2022, to remove the technical difficulties in obtaining building plan sanctions in the areas which do not fall in the jurisdiction of the local planning authorities. Section 4-K of the Karnataka Town and Country Planning Act, 1961 (Karnataka Act 11 of 1963) stipulates the regulation of development of land in the areas other than the local planning area. In view of this, the provisions of section 387 of the Karnataka Municipalities Act, 1964 (Karnataka Act 22 of 1964) needs to be omitted with effect from 12.08.2021, i.e. from the date of insertion of section 4-K in the Karnataka Town and Country Planning Act, 1961 (Karnataka Act 11 of 1963).

Therefore it is considered necessary further to amend the Karnataka Municipalities Act, 1964 (Karnataka Act 22 of 1964) to exempt taking approval for building plans in rural areas from the Department of Town and Country Planning and for matters connected therewith or incidental thereto.

As the matter was urgent and both the Houses of the State Legislature were not in session, the Karnataka Municipalities(Amendment) Ordinance, 2022 (Karnataka Ordinance 03 of 2022) was promulgated to achieve the above object.

**N. NAGARAJU (MTB)**
Minister for Municipal
Administration

**M.K. VISHALAKSHI**
Secretary
Karnataka Legislative Assembly

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



## ANNEXURE

## EXTRACT FROM THE KARNATAKA MUNICIPALITIES ACT, 1964.
## (KARNATAKA ACT 22 OF 1964)

**XX XX XX**

**387. Consultation with Planning Authority.-** The Municipal Council shall, in places where the Planning Authority has not been constituted under the Karnataka Town and Country Planning Act, consult the nearest planning authority in matters affecting town planning.

**XX XX XX**

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು
SUNIL GARDE Digitally signed by SUNIL GARDE Date: 2022.09.14 17:44:23 +05'30'